ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಮುದ್ದೇಬಿಹಾಳ

**ಸಿ.ಸಿ. ನಂ– 43/2018**

**ಫ್ರಾಸಾಃ 7, ಚಾಸಾಃ 5**

| | | |
|---|---|---|
| ಹೆಸರು | : | ಮುತ್ತಪ್ಪ ತಂದೆ ಶೆಟ್ಟೆಪ್ಪ ಮಾದರ |
| ವಯಸ್ಸು | : | 28 ವರ್ಷ |
| ಉದ್ಯೋಗ | : | ಚಾಲಕ |
| ವಾಸಸ್ಥಳ | : | ಮುದ್ನಾಳದ ಪದ್ಮಾವತಿ ಪ್ಲಾಟ |

ದಿನಾಂಕಃ 07/03/2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಎಪಿಪಿಯವರಿಂದ

ನನಗೆ ಚಾಸಾ 1 ನನ್ನ ಅಕ್ಕಳಾಗಬೇಕು. ಚಾಸಾ 4 ನನ್ನ ತಮ್ಮ, ಚಾಸಾ 6 ನನ್ನ ತಾಯಿ, ಚಾಸಾ 7 ನನ್ನ ತಂಗಿಯಾಗಬೇಕು ಮತ್ತು ಚಾಸಾ 8 ರವರು ನನ್ನ ಅಕ್ಕನ ಮಗಳಾಗಬೇಕು. ಆರೋಪಿತರ ಪರಿಚಯ ಇರುತ್ತದೆ.

2. ಈಗ ಮೂರು ವರ್ಷಗಳ ಹಿಂದೆ ಚಾಸಾ 8 ರವರಿಗೆ ಚುಡಾಯಿಸಬೇಡ ಅಂತಾ ಚಾಸಾ 4 ಮತ್ತು 6 ರವರು 9 ನೇ ಆರೋಪಿತನಿಗೆ ಹೇಳಿದ್ದು, ಆತ ಹೂಂ ಅಂತಾ ಹೇಳಿ ಮತ್ತೆ ಚಾಸಾ 8 ರವರಿಗೆ ಚುಡಾಯಿಸುತ್ತಿದ್ದ. 8–10 ದಿನಗಳನ್ನು ಬಿಟ್ಟು ಆರೋಪಿತರು ತಮ್ಮ ಕೈಯಲ್ಲಿ ರಾಡು, ಕಲ್ಲು, ರಬ್ಬರ್ ಹಿಡಿದುಕೊಂಡು ಮೋಟಾರ ಸೈಕಲ್ ಮತ್ತು ರಿಕ್ಷಾದಲ್ಲಿ ನಮ್ಮ ಮನೆಯ ಹತ್ತಿರ ಬಂದರು. ಆಗ ನಾನು ಯಾರು ಅಂತಾ ಹೊರಗೆ ನೋಡಲು ಹೋದಾಗ 1 ನೇ ಆರೋಪಿ ಚಾಸಾ 4 ರವರಿಗೆ ರಾಡಿನಿಂದ ತಲೆಗೆ ಹೊಡೆದ ಕಾರಣ ತಕ್ಷಣ ಆತ ತಲೆಸುತ್ತಿ ಕೆಳಗೆ

ಬಿದ್ದಿರುತ್ತಾನೆ. 7 ನೇ ಆರೋಪಿ ಚಾಸಾ 6 ರವರಿಗೆ ತಲೆಯಲ್ಲಿನ ಕೂದಲು ಹಿಡಿದು ಹೊಡೆದಿರುತ್ತಾರೆ. 4, 5 ಮತ್ತು 8 ನೇ ಆರೋಪಿತರು ಚಾಸಾ 7 ರವರಿಗೆ ಹೊಡೆದಿರುತ್ತಾರೆ. 3 ರಿಂದ 5 ನೇ ಆರೋಪಿತರು ಚಾಸಾ 7 ರವರ ಸೀರೆ, ಜಂಪರ್ ಹಿಡಿದು ಜಗ್ಗಾಡಿರುತ್ತಾರೆ. 2 ನೇ ಆರೋಪಿ ನನಗೆ ಕೊಡಲಿ ಕಾವು ತೆಗೆದುಕೊಂಡು ಬೆನ್ನಿಗೆ ಹೊಡೆದಿರುತ್ತಾರೆ, ರಬ್ಬರ್ ತೆಗೆದುಕೊಂಡು 2 ನೇ ಆರೋಪಿ ನನ್ನ ಬಾಯಿಗೆ ಮತ್ತು ಬಡಿಗೆಯಿಂದ ಎರಡೂ ಕೈಗಳಿಗೆ ಹೊಡೆದಿರುತ್ತಾನೆ. ಅಲ್ಲಿ ಗಲಾಟೆ ಬಿಡಿಸಲು ಯಾರೂ ಇರಲಿಲ್ಲ, ಆಗ ಚಾಸಾ 7 ರವರು ಪೋನ ಮಾಡಿ ಚಾಸಾ 1 ರವರಿಗೆ ಕರೆಸಿದ್ದರು. ಆಗ ಚಾಸಾ 7 ರವರು ಬಂದು ಗಲಾಟೆ ಬಿಡಿಸಿರುತ್ತಾರೆ. ನಂತರ ಚಾಸಾ 1 ರವರು ನನಗೆ, ಚಾಸಾ 4 ಮತ್ತು 6 ರವರಿಗೆ ಬಿಜಾಪೂರದ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ನಾನು, ಚಾಸಾ 4 ಮತ್ತು 6 ರವರು ಸರಕಾರಿ ಆಸ್ಪತ್ರೆಯಲ್ಲಿ 7–8 ದಿನ ಅಡಮಿಟ್ ಇದ್ದೆವು. ನಂತರ ನನ್ನ ಅಕ್ಕ ಚಾಸಾ 1 ರವರು ಘಟನೆಯಾದ 3 ದಿನಗಳ ನಂತರ ಮುದ್ದೆಬಿಹಾಳ ಪೋಲಿಸ ಠಾಣೆಗೆ ದೂರು ಕೊಟ್ಟಿರುತ್ತಾರೆ.

3. ಆ ದಿನ ನಮ್ಮ ಜೊತೆ ಗಲಾಟೆ ಮಾಡಿ ಹೊಡೆಯಲು ಬಂದಿದ್ದ ವ್ಯಕ್ತಿಗಳೇ ನ್ಯಾಯಾಲಯದ ಮುಂದೆ ಇರುವ ಆರೋಪಿತರಾಗಿರುತ್ತಾರೆ. ಸಾಕ್ಷಿ 8 ಮತ್ತು ಇನ್ನೊಬ್ಬ ಆರೋಪಿತರು ನ್ಯಾಯಾಲಯದ ಮುಂದೆ ಹಾಜರಿರುವುದಿಲ್ಲ ಎಂದು

ನುಡಿದಿರುತ್ತಾರೆ. ಆರೋಪಿತರ ಪರ ವಕೀಲರು ಗುರುತಿಸಲು ಯಾವುದೇ ತಕರಾರು ಇಲ್ಲ ಎಂದು ನುಡಿದಿರುತ್ತಾರೆ.

4. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಕಟ್ಟಿಗೆಯ ಕಾವು, ಬಿದಿರಿನ ಬಡಿಗೆಗಳು, ಕಬ್ಬಿಣದ ರಾಡುಗಳು, ಹಿಡಿಗ್ಗೈ ಅಳತೆಯ ಕಲ್ಲುಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ಮು.ಮಾ 1 ರಿಂದ 8 ಎಂದು ಗುರುತಿಸಲಾಗಿದೆ.

(ಈ ಸಮಯದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟಿ ಸವಾಲಿಗೆ ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)

<u>ಪಾಟಿ ಸವಾಲುಃ ಮಾನ್ಯ ಎಪಿಪಿಯವರಿಂದ .</u>

5) ದಿಃ 27/12/2017 ರಂದು ಮದ್ಯಾಹ್ನ 1.30 ರ ಸುಮಾರಿಗೆ 12 ಜನ ಆರೋಪಿತರು ಎರಡು ರಿಕ್ಷಾ ತೆಗೆದುಕೊಂಡು ಬಂದರು ಎಂದರೆ ಸರಿ. ಆರೋಪಿತರು ನಮ್ಮ ಮನೆಯಲ್ಲಿ ನುಗ್ಗಿ ಚಾಸಾ 7 ರವರು ಚಾಸಾ 1 ರವರಿಗೆ ಪೋನ ಮಾಡಿ ಆರೋಪಿತರು ನನಗೆ, ಚಾಸಾ 4 ರಿಂದ 6 ರವರಿಗೆ ಹೊಡೆಯುತ್ತಿದ್ದಾರೆ ಅಂತಾ ಹೇಳಿರುತ್ತಾರೆ ಎಂದರೆ ಸರಿ. 2 ನೇ ಆರೋಪಿ ನನಗೆ ಕೊಡಲಿಯಿಂದ ಬಾಯಿಗೆ ಹೊಡೆದಿದ್ದರಿಂದ ನನಗೆ ರಕ್ತ ಬರಲು ಪ್ರಾರಂಭಿಸಿತು

ಎಂದರೆ ಸರಿ. 1 ರಿಂದ 12 ನೇ ಆರೋಪಿತರು ನನಗೆ ಬೆನ್ನಿಗೆ ಹೊಡೆದಿರುತ್ತಾರೆ ಎಂದರೆ ಸರಿ. ನನ್ನ ತಾಯಿ ಚಾಸಾ 6 ರವರಿಗೆ 8 ಮತ್ತು 12 ನೇ ಆರೋಪಿತರು ಕೈಯಲ್ಲಿರುವ ಕಬ್ಬಿಣದ ರಾಡಿನಿಂದ ತಲೆಗೆ ಹೊಡೆದಿರುತ್ತಾರೆ. 3 ಮತ್ತು 4 ನೇ ಆರೋಪಿತರು ಚಾಸಾ 6 ರವರಿಗೆ ಕೈಯಲ್ಲಿರುವ ಬಡಿಗೆಯಿಂದ ಬಲಗೈ ಕಿರುಬೆರಳಿಗೆ ಹೊಡೆದಿರುತ್ತಾರೆ ಎಂದರೆ ಸರಿ. ಜಗಳ ಬಿಡಿಸಲು ಹೋದ ಚಾಸಾ 7 ರವರಿಗೆ 7 ನೇ ಆರೋಪಿ ಅವರನ್ನು ಬಾಗಿಸಿದ್ದು, 3 ಮತ್ತು 4 ನೇ ಆರೋಪಿತರು ಚಾಸಾ 7 ರವರ ಸೀರೆ ಹಿಡಿದು ಎಳೆದಾಡಿ ಜಂಪರ್ ಹರಿದು, ಸಾರ್ವಜನಿಕವಾಗಿ ಅವಮಾನ ಮಾಡಿ, ಬೆನ್ನಿಗೆ ಬಡಿಗೆಯಿಂದ ಹೊಡೆದಿರುತ್ತಾರೆ ಎಂದರೆ ಸರಿ. ಸದರಿ ಗಲಾಟೆ ಅರ್ಧ ಗಂಟೆಯವರೆಗೆ ನಡೆದಿರುತ್ತದೆ ಎಂದರೆ ಸರಿ. ಆರೋಪಿತರು ಊರಾಗ ಬಾಳೇ ಮಾಡಿರಿ ಮಕ್ಕಳೇ ನಿಮ್ಮ ಜೀವ ತೆಗೆತಿವಿ ಅಂತಾ ಹೇಳಿ ಪ್ರಾಣ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ. ಚಾಸಾ 1 ರವರು ನಮ್ಮನ್ನು ಹೊಡೆಯುತ್ತಿದ್ದಾರೆ ಯಾರಾದರೂ ಗಲಾಟೆ ಬಿಡಿಸಿ ಬನ್ನಿ ಅಂತಾ ಹೇಳಿದಾಗ ಚಾಸಾ 9 ರಿಂದ 11 ರವರು ಬಂದು ಗಲಾಟೆ ಬಿಡಿಸಿರುತ್ತಾರೆ ಎಂದರೆ ಸರಿ. ನಂತರ ಚಾಸಾ 1 ರವರು ನನಗೆ ಚಾಸಾ 4 ಮತ್ತು 6 ರವರಿಗೆ ಮುದ್ದೇಬಿಹಾಳ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದರೆ ಸರಿ. ಹೆಚ್ಚಿನ ಚಿಕಿತ್ಸೆಗಾಗಿ ನಮ್ಮನ್ನು ವಿಜಯಪೂರ ಸರಕಾರಿ ಆಸ್ಪತ್ರೆಗೆ ಅದೇ ದಿನ ಕಳುಹಿಸಿರುತ್ತಾರೆ

ಎಂದರೆ ಸರಿ. ದಿಃ 29/12/2017 ರಂದು ಚಾಸಾ 1 ರವರು ಮುದ್ದೇಬಿಹಾಳ ಪೋಲಿಸ ಠಾಣೆಯಲ್ಲಿ ದೂರನ್ನು ನೀಡಿರುತ್ತಾರೆ ಎಂದರೆ ಸರಿ. ಈ ವಿಚಾರಕ್ಕೆ ಸಂಬಂಧಪಟ್ಟಂತೆ ನಾನು ದಿಃ 31/12/2017 ರಂದು ಮುದ್ದೇಬಿಹಾಳ ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ. ಈ ದಿನ ನ್ಯಾಯಾಲಯಕ್ಕೆ 11 ನೇ ಆರೋಪಿಯೂ ಸಹ ಬಂದಿರುವುದಿಲ್ಲ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ ಹೆಚ್ ಹೆಚ್ ವಕೀಲರಿಂದ**

6. ನಮ್ಮ ಮನೆಯ ಮುಂದೆ ಸಂಗಪ್ಪ ಮಾದರ ಇವರ ಮನೆ ಇರುತ್ತದೆ ಎಂದರೆ ಸರಿ. ಸಂಗಪ್ಪನ ಸೊಸೆಯ ಹೆಸರು ಸುಮಿತ್ರಾ ಅಂತಾ ಇರುತ್ತದೆ. ಈ ಗಲಾಟೆಯಾದ ನಂತರ ಸಂಗಪ್ಪನ ಸೊಸೆ ಸುಮಿತ್ರಾಳ ಜೊತೆ ಅನೈತಿಕ ಸಂಬಂಧದ ಸಲುವಾಗಿ ನಮ್ಮ ಮತ್ತು ಅವರ ನಡುವೆ ಜಗಳ ಆಗಿತ್ತು ಎಂದರೆ ಸರಿ. ಆ ಸಮಯದಲ್ಲಿ ನಾವು ಸಂಗಪ್ಪರವರ ಜೊತೆಗೆ ಅಪಸಾತ ಅವರಿಗೆ 20 ಸಾವಿರ ರೂ. ಹಣ ಕೊಟ್ಟಿರುತ್ತೇವೆ ಎಂದರೆ ಸರಿ. ಚಾಸಾ 4 ರವರು ಬಿದರಕುಂದಿ ಗ್ರಾಮದ ಹೆಣ್ಣು ಮಗಳ ಜೊತೆ ಗಲಾಟೆ ಮಾಡಿಕೊಂಡು ಅಲ್ಲಿ 50 ಸಾವಿರ ರೂ. ಕೊಟ್ಟು ಬಗೆಹರಿಸಿಕೊಂಡಿರುತ್ತಾರೆ ಎಂದರೆ ಸರಿ. ಈ ವಿಚಾರಕ್ಕೆ ಸಂಬಂಧಪಟ್ಟಂತೆ ಆರೋಪಿತರು ನಮಗೆ ಬುದ್ದಿ ಹೇಳಲು ಬಂದಿದ್ದರು ಎಂದರೆ ಸರಿ. ಈ ಘಟನೆಯಾಗುವ ಒಂದು ತಿಂಗಳ ಪೂರ್ವದಲ್ಲಿ ನನ್ನ ಮತ್ತು ಸುಮಿತ್ರಾಳ ಅನೈತಿಕ

ಸಂಬಂಧದ ಕುರಿತು ಗಲಾಟೆಯಾಗಿತ್ತು ಎಂದರೆ ಸರಿಯಲ್ಲ. ಆರೋಪಿತರು ಸುಮಿತ್ರಾಳ ವಿಷಯಕ್ಕೆ ಸಂಬಂಧಪಟ್ಟಂತೆ ನನಗೆ ಬುದ್ದಿ ಹೇಳಲು ಬಂದಾಗಿನಿಂದ ನಮ್ಮ ಮತ್ತು ಆರೋಪಿತರ ಮಧ್ಯೆ ಮನಸಾ ಮನಸ ಸರಿ ಇರುವುದಿಲ್ಲ ಎಂದರೆ ಸರಿಯಲ್ಲ.

7. ಗಲಾಟೆಯಾದ ಸಮಯದಲ್ಲಿ ನಾನು ನಮ್ಮ ಮನೆಯಲ್ಲಿದ್ದೆನು. ಗಲಾಟೆ ನಮ್ಮ ಮನೆಯ ಮುಂದೆ ಆಗಿರುತ್ತದೆ, ಆದರೆ ಮನೆಯಿಂದ ಎಷ್ಟು ಫೂಟು ದೂರ ಅಂತಾ ನನಗೆ ಹೇಳಲು ಬರುವುದಿಲ್ಲ. ನಮ್ಮ ಮನೆಯ ಪೂರ್ವಕ್ಕೆ ಶೋಭಾ ಚಲವಾದಿ ಇವರ ಮನೆ ಇರುತ್ತದೆ, ಪಶ್ಚಿಮಕ್ಕೆ ಮಲ್ಲಮ್ಮ ಮುರಾಳ ಇವರ ಮನೆ ಇರುತ್ತದೆ, ದಕ್ಷಿಣಕ್ಕೆ ರಾಮಚಂದ್ರ ರಾಠೋಡ ಇವರ ಮನೆ ಮತ್ತು ಉತ್ತರಕ್ಕೆ ತಾಂಡಾದವರ ಖಾಲಿ ಮನೆಗಳು ಇರುತ್ತವೆ.

8. ಗಲಾಟೆಯಾದ ಸಮಯದಲ್ಲಿ ಅಲ್ಲಿ ಯಾರೂ ಇರಲಿಲ್ಲ, ಆರೋಪಿತರು ಹೊಡೆದ ನಂತರ ಅಲ್ಲಿ ಜನರು ಸೇರಿರುತ್ತಾರೆ. ಗಲಾಟೆಯಾದ ಅರ್ಧ ಗಂಟೆಯ ನಂತರ ಅಲ್ಲಿ ಜನರು ಸೇರಿರುತ್ತಾರೆ. ದೂರು ಕೊಡಲು ನನ್ನ ಅಕ್ಕ ಚಾಸಾ 1 ರವರು ಹೋಗಿದ್ದರು. ಘಟನೆಯಾದ ಮೂರು ದಿನಗಳ ನಂತರ ಚಾಸಾ 1 ರವರು ದೂರು ನೀಡಲು ಹೋಗಿರುತ್ತಾರೆ. ಚಾಸಾ 1 ರವರಿಗೆ

ಮದುವೆಯಾಗಿರುವುದಿಲ್ಲ ಎಂದರೆ ಸರಿ. ಘಟನಾ ಸ್ಥಳದಿಂದ ಪೋಲಿಸ ಠಾಣೆ 2–3 ಕಿ.ಮೀ ದೂರದಲ್ಲಿ ಇರುತ್ತದೆ ಎಂದರೆ ಸರಿ. ಪೋಲಿಸರು ನನ್ನ ಹೇಳಿಕೆಯನ್ನು ಬಿಜಾಪೂರ ಆಸ್ಪತ್ರೆಯಲ್ಲಿ ತೆಗೆದುಕೊಂಡಿರುತ್ತಾರೆ. ನಾನು ಮುದ್ದೇಬಿಹಾಳದಲ್ಲಿ ಯಾವುದೇ ಹೇಳಿಕೆ ಕೊಟ್ಟಿರುವುದಿಲ್ಲ ಎಂದರೆ ಸರಿ.

9. ಯಾವ ಆರೋಪಿ ಯಾರಿಗೆ, ಎದರಿಂದ ಎಷ್ಟು ಪೆಟ್ಟು ಹೊಡೆದಿರುತ್ತಾರೆ ಅಂತಾ ಹೇಳಿ ನಿಖರವಾಗಿ ನನಗೆ ಹೇಳಲು ಬರುವುದಿಲ್ಲ. ಆರೋಪಿತರು ಕೊಡಲಿ ಕಾವಿನಿಂದ ನನಗೆ ರಕ್ತ ಬಂದಿದ್ದು, ಹಲ್ಲು ಬಿದ್ದಿರುವುದಿಲ್ಲ. ರಕ್ತ ಎಲ್ಲಾ ಅಂಗಿ ಮತ್ತು ಪ್ಯಾಂಟಿಗೆ ಮುಳುಗಿತ್ತು ಎಂದರೆ ಸರಿ. ರಕ್ತ ಮುಳುಗಿದ ಅಂಗಿ ಮತ್ತು ಪ್ಯಾಂಟನ್ನು ನಾನು ಪೋಲಿಸರಿಗೆ ತೋರಿಸಿರುತ್ತೇನೆ. ರಕ್ತ ಮುಳುಗಿದ ಅಂಗಿ ಮತ್ತು ಪ್ಯಾಂಟನ್ನು ಪೋಲಿಸರು ಅಮಾನತ್ತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿ. ನನ್ನ ಡುಬ್ಬಕ್ಕೆ ಯಾರು ಯಾರು ಹೊಡೆದಿರುತ್ತಾರೆ ಅಂತಾ ಹೇಳಿ ನನಗೆ ಗೊತ್ತಿಲ್ಲ. 2 ನೇ ಆರೋಪಿ ಬಡಿಗೆಯಿಂದ ಬಾಯಿಯಿಂದ ಹೊಡೆದ ಕಾರಣ ನನಗೆ ರಕ್ತ ಬಂದಿರುತ್ತದೆ ಅಂತಾ ಹೇಳಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾಯಿ ಚಾಸಾ 6 ರವರಿಗೆ ಯಾರು ಯಾರು ಹೊಡೆದಿರುತ್ತಾರೆ ಅಂತಾ ಹೇಳಿ ನನಗೆ ಗೊತ್ತಿಲ್ಲ. 7 ನೇ ಆರೋಪಿ ಚಾಸಾ 7 ರವರಿಗೆ ತಲೆಯ

ಕೂದಲು ಹಿಡಿದು ಬಗ್ಗಿಸಿ ಡುಬ್ಬಕ್ಕೆ ಹೊಡೆದು, ಮೈಮೇಲಿನ ಬಟ್ಟೆ ಹರಿದಿರುತ್ತಾರೆ. 7 ನೇ ಆರೋಪಿ ಚಾಸಾ 7 ರವರಿಗೆ ತಲೆಯ ಕೂದಲು ಹಿಡಿದು ಬಗ್ಗಿಸಿ ಡುಬ್ಬಕ್ಕೆ ಹೊಡೆದು, ಮೈಮೇಲಿನ ಬಟ್ಟೆ ಹರಿದಿರುತ್ತಾರೆ ಅಂತಾ ಹೇಳಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ 8 ರವರಿಗೆ 9 ನೇ ಆರೋಪಿ ಚುಡಾಯಿಸಿದ ಕಾರಣ ಚಾಸಾ 4 ಮತ್ತು 5 ರವರು ಕೇಳಲು ಹೋಗಿದ್ದರು ಅಂತಾ ಹೇಳಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1 ರಿಂದ 12 ನೇ ಆರೋಪಿತರು ಅವಾಚ್ಯ ಶಬ್ದಗಳಿಂದ ಬೈದು, ಮು.ಮಾ 1 ರಿಂದ 8 ನಮಗೆ ಹೊಡೆದಿರುತ್ತಾರೆ ಅಂತಾ ಹೇಳಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

10. ಮು.ಮಾ 1 ರಿಂದ 8 ರಲ್ಲಿ ಕೊಡಲಿ ಕಾವು ಇರುವುದಿಲ್ಲ ಎಂದರೆ ಸರಿಯಲ್ಲ. ಮು.ಮಾ 1 ರಿಂದ 8 ರಂತಹ ವಸ್ತುಗಳು ಎಲ್ಲಾ ಕಡೆ ಸಿಗುತ್ತವೆ ಎಂದರೆ ಸರಿಯಲ್ಲ. ಮು.ಮಾ 1 ರಿಂದ 8 ರಲ್ಲಿ ರಾಡು ಇರುವುದಿಲ್ಲ ಎಂದರೆ ಸರಿಯಲ್ಲ. ವಿಜಯಪೂರ ಆಸ್ಪತ್ರೆಯಲ್ಲಿ ಪೋಲಿಸರು ಏನು ಬರೆದುಕೊಂಡಿರುತ್ತಾರೆ ಅಂತಾ ಹೇಳಿ ನನಗೆ ಗೊತ್ತಿಲ್ಲ ಎಂದರೆ ಸರಿ. ಆರೋಪಿತರನ್ನು ಮೊದಲನೇ ಬಾರಿಗೆ ನಾನು ನ್ಯಾಯಾಲಯದ ಮುಂದೆ

ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ನನಗೆ, ಚಾಸಾ 4, 6 ಮತ್ತು 7 ರವರಿಗೆ ಹೊಡೆದಿರುತ್ತಾರೆ ಅಂತಾ ಹೇಳಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ 9 ರಿಂದ 11 ರವರು ಬಂದು ಗಲಾಟೆ ಬಿಡಿಸಿರುತ್ತಾರೆ ಅಂತಾ ಹೇಳಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ರಿಕ್ಷಾ ಮತ್ತು ಮೋಟಾರ ಸೈಕಲ್ ತೆಗೆದುಕೊಂಡು, ತಮ್ಮ ಕೈಯಲ್ಲಿ ಬಡಿಗೆ, ರಾಡು ಮತ್ತು ಕೊಡಲಿ ಹಿಡಿದುಕೊಂಡು ನಮ್ಮ ಮನೆ ಕಡೆಗೆ ಬಂದಿದ್ದರು ಅಂತಾ ಹೇಳಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಸಾವಿತ್ರಿಯ ಜೊತೆಗೆ ಅನೈತಿಕ ಸಂಬಂಧದ ಸಲುವಾಗಿ ನನಗೆ ಬುದ್ದಿವಾದ ಹೇಳಿದ್ದಕ್ಕೆ ನಾನು ಸಿಟ್ಟಾಗಿ ಆರೋಪಿತರ ವಿರುದ್ಧ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ಯಾವುದೇ ಘಟನೆ ನಡೆದಿರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲಾ

(ತೆ ನ್ಯಾ ನನ್ನ ಹೇ ಬೆ ಮಾಡಲಾಗಿದೆ)

ನನ್ನ ಸಮಕ್ಷಮ,

ಓ.ಹೇ.ಕೇ.ಸರಿ.ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ. ಮುದ್ದೇಬಿಹಾಳ